೩.	ಸಾಮಾಜಿಕ ಭದ್ರತಾ ನೆಡುತೋಪು ಬೆಳೆಸಿಕೊಡುವುದು	... ೩೯ ಫಲಾನುಭವಿಗಳು
೪.	ನಾಟಾ ತಯಾರಿಕೆಯಲ್ಲಿ ತರಬೇತಿ ಕೊಡುವುದು	... ೧೦ ಫಲಾನುಭವಿಗಳು
೫.	ಕಮ್ಯುನಿಟಿ ಹಾಲ್ ಕಟ್ಟುವುದು	... ೧ ಫಲಾನುಭವಿಗಳು
೬.	ಬಾವಿ ತೋಡುವುದು	... ೧ ಫಲಾನುಭವಿಗಳು

ಹರಿಜನ ಆರ್ಥಿಕ ಸಂಧಾರಣೆಗಾಗಿ ಇರುವ ಯೋಜನೆ ಈ ಕೆಳಗಿನಂತಿವೆ.

೧.	ಸಾಮಾಜಿಕ ಭದ್ರತಾ ನೆಡಂತೋಪು	... ೨೫ ಹೆಕ್ಟೇರು, ೫೦ ಫಲಾನುಭವಿಗಳು
೨.	ಆಸ್ತ್ರಒಲೆ ವಿತರಣೆ	... ೩೦ ಫಲಾನುಭವಿಗಳು

ಶ್ರೀಮತಿ ಸುಮಾ ವಸಂತ್.—ಮಾನ್ಯ ಅಧ್ಯಕ್ಷರೆ, ಹರಿಜನ-ಗಿರಿಜನರಿಗಾಗಿ ಕೆಲವು ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗಿದೆ. ಇದನ್ನು ಕೊಡಗು ಜಿಲ್ಲೆಯಲ್ಲಿ ಎಷ್ಟು ಹರಿಜನರಿಗೆ ಜಾರಿಗೊಳಿಸಿದೆ?

ಶ್ರೀ ಜೆ. ಎಸ್. ದೇಶವಂಖ್.—ಮಾನ್ಯ ಅಧ್ಯಕ್ಷರೆ, ಹರಿಜನರಿಗೆ ಈಗಾಗಲೇ ಅಂದರೆ ೧೯೬೬-೬೭ರಲ್ಲಿ ೨೨ ಮನೆಗಳನ್ನು ಕಟ್ಟಲಾಗಿದೆ. ಮಾನ್ಯ ಸದಸ್ಯರಿಗೆ ವಿವರ ಬೇಕು ಅಂದರೆ ಅವುಗಳು ನನ್ನ ಬಳಿ ಇದೆ. ಅದನ್ನು ಮಾನು ಕೊಡುತ್ತೇನೆ.

ಶ್ರೀಮತಿ ಸುಮಾ ವಸಂತ.—ಮಾನ್ಯ ಅಧ್ಯಕ್ಷರೆ, ಹರಿಜನ-ಗಿರಿಜನರು ಆನಾದಿ ಕಾಲದಿಂದಲೂ ವಾಸಿಸುತ್ತಿದ್ದಾರೆ, ಎಷ್ಟು ವರ್ಷಗಳಿಂದ ವಾಸಿಸುತ್ತಿದ್ದಾರೋ ಗೊತ್ತಿಲ್ಲ ಎಂದು ಉತ್ತರದಲ್ಲಿ ಹೇಳಿದ್ದಾರೆ. ಎರಡು ವರ್ಷಗಳಿಂದ ಹರಿಜನ-ಗಿರಿಜನರಿಗೆ ಆರಣ್ಯ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ತುಂಬ ಕಿರುಕುಳ ಕೊಡುತ್ತಾ ಇದ್ದಾರೆ. ನಿನ್ನೆ ಕೂಡ ನನಗೆ ಟೆಲಿಗ್ರಾಂ ಬಂದಿದೆ. ಆ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಜೆ. ಎಸ್. ದೇಶವಂಖ್.—ಸೂಕ್ತ ಪರಿಶೀಲನೆ ಮಾಡಿ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

ಕೂಡ್ಲಿಗಿ ತಾಲ್ಲೂಕಿನಲ್ಲಿ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಪೂರೈಕೆ

೬೮೫ (ಡಿ) ಶ್ರೀ ಕೆ. ವಿ. ರವೀಂದ್ರನಾಥ್ ಬಾಬು (ಕೊಟ್ಟೂರು).—ಮಾನ್ಯ ವಾಣಿಜ್ಯ ಕೈಗಾರಿಕಾ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನಲ್ಲಿ ಬಹಳಷ್ಟು ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಅವುಗಳ ಸಂಖ್ಯೆ ಎಷ್ಟು ?

ಇ) ವಿದ್ಯುಚ್ಛಕ್ತಿ ಒದಗಿಸುವಲ್ಲಿನ ವಿಳಂಬಕ್ಕೆ ಕಾರಣಗಳೇನು ?

ಈ) ಬ್ಯಾಂಕಿನವರು ಸಾಲಗಾರರು ಬಡ್ಡಿ ಪಾವತಿ ಮಾಡದಿದ್ದುದರಿಂದ ಪಂಪುಸೆಟ್ಟುಗಳನ್ನು ವಾಪಸ್ಸು ಪಡೆಯಲು ನಿರ್ಧರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಉ) ಹಾಗಿದ್ದಲ್ಲಿ ಸರ್ಕಾರವು ಈ ದಿಸೆಯಲ್ಲಿ ಕೈಗೊಂಡ ಕ್ರಮಗಳೇನು ?

ಶ್ರೀ ಜೆ.ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ಬಂದಿದೆ.

ಆ) ೩೧-೧-೬೭ ರಲ್ಲಿದಂತೆ ೧೭೬.

ಇ) ಕಾರ್ಯಕ್ರಮದಂತೆ ಕೆಲಸ ಮಾಡಲಾಗುತ್ತಿದೆ.

ಈ) ಸರ್ಕಾರದ ಗಮನಕ್ಕೆ ಬಂದಿಲ್ಲ.

ಉ) (ಈ) ಪ್ರಶ್ನೆಯು ಉತ್ಪಾದಿಸುವುದಿಲ್ಲ

ಶ್ರೀ ಕೆ.ವಿ. ರವೀಂದ್ರನಾಥ ಬಾಬು.—ಮಾನ್ಯ ಅಧ್ಯಕ್ಷರೆ, ಪಂಪುಸೆಟ್ಟುಗಳಿಗೆ ಪವರ್ ಕನೆಕ್ಷನ್ ಕೊಡಲಿಕ್ಕೆ ಡಿಲೇ ಆಗಿರುವುದಕ್ಕೆ ಕಾರಣವೇನು ಏನ್ನಿವುದನ್ನು ಸ್ವಲ್ಪ ತಿಳಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೆ, ಒಂದೊಂದು ಜಿಲ್ಲೆಯಲ್ಲಿ ಅಥವಾ ಒಂದೊಂದು ತಾಲ್ಲೂಕಿನಲ್ಲಿ ವರ್ಷಕ್ಕೆ ಇಷ್ಟು ಕೊಡಬೇಕು ಎಂದು ಟಾರ್ಗೆಟ್ ಇಟ್ಟುಕೊಳ್ಳುತ್ತೇವೆ. ಆ ಪ್ರಕಾರ ಕೂಡ್ಲಿಗಿ ತಾಲ್ಲೂಕಿನಲ್ಲಿ ೧೯೮೬–೮೭ರಲ್ಲಿ ೨೦೬ ಟಾರ್ಗೆಟ್ ಇತ್ತು. ಆದರೆ ಕನೆಕ್ಷನ್ ಕೊಟ್ಟಿರುವುದು ೨೨೬ಕ್ಕೆ. ಈಗ ಡಿಲೇ ಅಂದರೆ, ನಾವು ಹಾಕಿರುವ ಟಾರ್ಗೆಟ್‌ಗಿಂತ ಳ ಪಟ್ಟುಗೆ ಪಟ್ಟು ಹೆಚ್ಚು ಅಪ್ಲಿಕೇಷನ್ಸ್ ಬರುತ್ತದೆ, ಆದ್ದರಿಂದ ಡಿಲೇ ಆಗುತ್ತದ.

ಶ್ರೀ ಕೆ. ವಿ. ರವಿಂದ್ರನಾಥ ಬಾಬು.—ಈ ಬಗ್ಗೆ ಅಲ್ಲಿನ ಕೆ.ಇ.ಬಿ.ಗೆ ಹೋಗಿ ವಿಚಾರಿಸಿದರೆ ಕಂಬಗಳು, ವೈರಂಗಳು, ಟ್ರಾನ್ಸ್‌ಫಾರ್‌ಮರ್‌ಗಳು ಮುಂತಾದ ಮೆಟೀರಿಯಲ್ಸ್ ಇಲ್ಲವೆಂದೂ, ಇವುಗಳ ಕೊರತೆ ಇದೆ ಎಂದು ಹೇಳುತ್ತಾರೆ. ಕೆಲವು ಕಡೆ ವಿದ್ಯುತ್ ಲೋಡ್ ಸಾಕಷ್ಟು ಇಲ್ಲದಿರುವ ಕಾರಣ ಹೊಸ ಟ್ರಾನ್ಸ್‌ಫಾರ್ಮರ್‌ಗಳನ್ನು ಹಾಕಬೇಕಾಗಿದೆ ಎಂದು ಹೇಳುತ್ತಾರೆ. ಈ ರೀತಿ ಕಾರಣ ಕೊಟ್ಟು ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸದಿದ್ದರೆ ರೈತರಿಗೆ ಕಷ್ಟವಾಗುತ್ತದೆ. ಅವರು ಬ್ಯಾಂಕ್‌ನಿಂದ ಪಡೆದ ಸಾಲಕ್ಕೆ ಬಡ್ಡಿ ಕಟ್ಟಬೇಕಾಗುತ್ತದೆ. ವಿದ್ಯುತ್ ಒದಗಿಸದಿದ್ದರೆ ಪಂಪ್‌ಸೆಟ್ಟುಗಳು ಸಹ ಹಾಳಾಗುತ್ತವೆ. ಆದ್ದರಿಂದ ಜಾಗ್ರತೆ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಒದಗಿಸಬೇಕೆಂದು ಕೇಳಿ ಕೊಳ್ಳುತ್ತೇನೆ ?

ಶ್ರೀ ಜೆ. ಹೆಚ್. ಪಟೇಲ್.—ಈ ಸಮಸ್ಯೆ ರಾಜ್ಯಾದ್ಯಂತ ಇದೆ.

ಅಧ್ಯಕ್ಷರು.—ಹೌದು.

ಶ್ರೀ ಜೆ. ಹೆಚ್. ಪಟೇಲ್.—ರೈತರು ಬ್ಯಾಂಕ್‌ನಿಂದ ಸಾಲ ತಂದಿರುವುದರಿಂದ, ನಾವು ವಿದ್ಯುತ್ ಕೊಡದಿದ್ದರೆ ರೈತರು ದುಡಿದಂ ಸಾಲವನ್ನು ಕಟ್ಟುವುದಕ್ಕಾಗುವುದಿಲ್ಲವೆಂಬುದು ನಿಜ. ಫೀಸಿಬಿಲಿಟಿ ರಿಪೋರ್ಟ್ ಇಲ್ಲದೆ ಸಾಲ ಸಿಗುವುದಿಲ್ಲ. ಇಲ್ಲಿ ಏನಾಗಿದೆ ಎಂದರೆ, ಎಷ್ಟು ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಕೊಡಲು ಸಾಧ್ಯವೋ ಅಷ್ಟಕ್ಕೆ ಮಾತ್ರ ಫೀಸಿಬಿಲಿಟಿ ರಿಪೋರ್ಟ್ ಕೊಡದೆ ಜಾಸ್ತಿ ಕೊಟ್ಟಿದ್ದಾರೆ. ಇಲ್ಲಿ ೨೨೬ ಜನರಿಗೆ ಬದಲು ೪೦೦ ಜನರಿಗೆ ಕೊಟ್ಟಿದ್ದಾರೆ. ಇದರಿಂದ ಈ ರೀತಿ ಆಗಿದೆ. ಇಲ್ಲಿ ರೈತರ ಕಷ್ಟ ಏನಿದೆ ಎಂಬುದನ್ನು ಸರ್ಕಾರದ ಗಮನಕ್ಕೆ ಬಂದಿದೆ. ಅದನ್ನು ಸರಿಪಡಿಸುತ್ತೇವೆ.

ಸುಳ್ಯ ತಾಲ್ಲೂಕಿನಲ್ಲಿ ವಿದ್ಯುತ್ ಇನ್‌ಸ್ಟಲೇಷನ್ ಮಂತ್ರ್ತು ಪಂಪುಸೆಟ್ಟುಗಳ ಬಗ್ಗೆ

೭೮೦. ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ವಾಣಿಜ್ಯ, ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸುಳ್ಯ ತಾಲ್ಲೂಕಿನಲ್ಲಿ ವಿದ್ಯುತ್ ಇನ್‌ಸ್ಟಲೇಷನ್ ಮಂತ್ರ್ತು ಪಂಪುಸೆಟ್ಟುಗಳ ಅರ್ಜಿಗಳ ವಿಲೇವಾರಿ ಮಾಡುವಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸದರಿ ಅರ್ಜಿಗಳ ವಿಲೇವಾರಿ ತೀವ್ರವಾಗಿ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಇ) ಮೇಲ್ಕಂಡ ಕೆಲಸ ಕಾರ್ಯಗಳಿಗಾಗಿ ಸಾರ್ವಜನಿಕರಿಗೆ ತೊಂದರೆಯಾಗುವುದರಿಂದ ಸುಳ್ಯದಲ್ಲಿ ಒಂದು ವಿದ್ಯುತ್ ಉಪ ವಿಭಾಗವನ್ನು ತೆರೆಯಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು).—

ಅ) ವಿಳಂಬವಾಗುತ್ತಿಲ್ಲ.

ಆ) ೧೯೮೬–೮೭ರಲ್ಲಿ ಗುರಿಗಿಂತಲೂ ಹೆಚ್ಚಾಗಿ ಪಂಪುಸೆಟ್ಟುಗಳಿಗೆ ಕರ್ನಾಟಕ ವಿದ್ಯುಚ್ಚಕ್ತಿ ಮಂಡಳಿ ವಿದ್ಯುತ್ ಒದಗಿಸಿದೆ.

ಇ) ಕರ್ನಾಟಕ ವಿದ್ಯುಚ್ಚಕ್ತಿ ಮಂಡಳಿಯು ಆರ್ಥಿಕ ಪರಿಸ್ಥಿತಿ ಸುಧಾರಿಸಿದ ನಂತರ ಸುಳ್ಯದಲ್ಲಿ ವಿದ್ಯುಚ್ಚಕ್ತಿ ಉಪ ಕೇಂದ್ರವನ್ನು ಸ್ಥಾಪಿಸಲು ಪರಿಶೀಲಿಸಲಾಗುವುದು.